**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 759/2020**

**ಪಿ.ಡಬ್ಲ್ಯೂಃ 1**

**ಸಾಕ್ಷಿಗೆ ದಿನಾಂಕಃ20.08.2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀಸವಾಲು ಆರೋಪಿತರ ಪರ ವಕೀಲರಿಂದ**

1. ನಾನು ಪಿಯುಸಿ ಯವರೆಗೆ ಓದಿದ್ದೇನೆ. ಆರೋಪಿತರೂ ಮತ್ತು ನಾವು ಸಂಬಂಧಿಕರು ಎಂದರೆ ಸರಿಯಲ್ಲ. ನಾವು ಒಂದೆ ಜನಾಂಗಕ್ಕೆ ಸೇರಿದವರು. ಪ್ರಶ್ನಿತ ಘಟನೆ ಆಗುವ ಮೊದಲೂ ನಮಗೂ ಮತ್ತು ಆರೋಪಿತರಿಗೂ ಹೊಲಕ್ಕೆ ಸಂಬಂಧಪಟ್ಟಂತೆ ಜಗಳ ಆಗಿದ್ದು ಅದು ವೆಂಕಟರಾಮರೆಡ್ಡಿ ರವರ ಮನೆಯಲ್ಲಿ ಪಂಚಾಯತಿ ಆಗಿತ್ತು ಎಂದರೆ ಸರಿಯಲ್ಲ. ನಮ್ಮ ಹಾಗೂ ಆರೋಪಿತರ ಹೊಲದ ನಡುವೆ ಕಾಲುವೆ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನೀರು ಬಿಟ್ಟುಕೊಳ್ಳಲು ಅದನ್ನು ನಾವೇ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಚಾಸಾ-6 ಮತ್ತು 7 ರವರ ಹೊಲ ನಮ್ಮ ಹೊಲದ ಬಳಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಪಹಣಿ ಪತ್ರಿಕೆಯನ್ನು ನಾನು ಪೊಲೀಸರಿಗೆ ಕೊಟ್ಟಿಲ್ಲ. ಹತ್ತಿ ಭೀಜದ ಬಿಲ್ ದಾಖಲೆಯನ್ನು ಪೊಲೀಸರಿಗೆ ಕೊಟ್ಟಿಲ್ಲ. ಘಟನೆ ನಡೆದಾಗ ಲಾಕ್ ಡೌನ್ ಇತ್ತು ಎಂದರೆ ಸರಿ. ಆ ಸಮಯದಲ್ಲಿ ನಾವು ಹೊಲಕ್ಕೆ ಹೋಗಿ ಕೆಲಸ ಮಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ.

2. ನಮಗೂ ಮತ್ತು ಆರೋಪಿತರಿಗೂ ಮೊದಲಿನಿಂದಲೂ ಜಗಳ ಇತ್ತು ಎಂದರೆ ಸರಿಯಲ್ಲ. ಪಶ್ನಿತ ಘಟನೆ ಸಮಯದಲ್ಲಿ ಆರೋಪಿತರು ತಮ್ಮ ಹೊಲವನ್ನು ಮಾರಾಟ ಮಾಡಲು ಮುಂದಾಗಿದ್ದರು ಎಂದರೆ ಸರಿಯಲ್ಲ. ಅವರ ಹೊಲವನ್ನು ನಾವು ಖರೀದಿ ಮಾಡುವ ಇಚ್ಚೆ ಹೊಂದಿದ್ದೆವು ಎಂದರೆ ಸರಿಯಲ್ಲ. ಮಾರ್ಚ್ ತಿಂಗಳಲ್ಲಿ ಯಾವುದೇ ಬೆಳೆ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-7 ಮತ್ತು 9 ರವರು ನಮ್ಮ ಸಂಬಂಧಿಕರು ಎಂದರೆ ಸರಿಯಲ್ಲ. ಚಾಸಾ-6 ರವರು ನಮ್ಮ ಸಂಬಂಧಿಕರು ಇರುತ್ತಾರೆ ಎಂದರೆ ಸರಿ. ಘಟನೆ ಸಂಬಂಧಪಟ್ಟಂತೆ ಆರೋಪಿತರೂ ಸಹ ನಮ್ಮ ಮೇಲೆ ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

3. ತೆಕ್ಕಲಕೋಟೆ ಪೊಲೀಸ್ ಠಾಣೆಯಲ್ಲಿ ಎಸ್ ಎಸ್ ಐ ಆಗಿರುವ ಮಲ್ಲಯ್ಯ ನಮ್ಮ ಸಂಬಂಧಿಕರು ಎಂದರೆ ಸರಿ. ಅವರ ಪ್ರಭಾವ ಬಳಸಿ ನಾನು ಆರೋಪಿತರು ನೀಡಿದ್ದ ದೂರು ಪ್ರಕರಣದಲ್ಲಿ ಪೊಲೀಸರು ಬಿ ವರದಿಯನ್ನು ಸಲ್ಲಿಸುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿಃ1



ರ ದೂರನ್ನು ಪೊಲೀಸರೇ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ತಾಳೂರು ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ಘಟನೆಯಾದಾಗ ಎಲ್ಲಾ ಆಸ್ಪತ್ರೆಗಳಲ್ಲಿ ವೈದ್ಯರು ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಬಳ್ಳಾರಿಯ ವಿಮ್ಸ್ ಆಸ್ಪತ್ರೆಯಲ್ಲಿ ಎಲ್ಲಾ ಸೌಲಭ್ಯ ಇದ್ದರೂ ಸಹ ಈ ಪ್ರಕರಣಕ್ಕೆ ದಾಖಲೆ ಸೃಷ್ಟಿ ಸಲು ನಾನು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಂಬರ್ 1 ರವರು ನಮಗೆ ಹೊಡೆದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಬೇಸಿಗೆ ಕಾಲದಲ್ಲಿ ಎರೆ ಹೊಲದಲ್ಲಿ ಬಿರುಕು ಬಿಡುತ್ತವೆ ಎಂದರೆ ಸರಿ. ಆಗ ನಮ್ಮ ಹೊಲದಲ್ಲಿ ನೀರು ಬಿಟ್ಟರೆ ಅದು ಬೇರೆ ಹೊಲಕ್ಕೆ ಹೋಗುತ್ತದೆ ಎಂದರೆ ಸರಿ. ಆರೋಪಿ ನಂಬರ್ 1 ರಿಂದ 3 ರವರು ಚಾಸಾ-4 ರವರಿಗೆ ಹೊಡೆ ಬಡೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ದೂರು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರು ನಮಗೆ ಹೊಲ ಮಾರಾಟ ಮಾಡಿಲ್ಲ ಎನ್ನುವ ಕಾರಣಕ್ಕೆ ನಾನು ಅವರ ವಿರುದ್ಧ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು-ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**